**ಮರ್ಯಾದೆಗೇಡು ಹತ್ಯೆ (Honour Killing) ಸುದ್ದಿ ದೇಶದಾದ್ಯಂತ ಸದ್ದು ಮಾಡುತ್ತಿದೆ. ಕುಟುಂಬ ಅಥವಾ ಸಮುದಾಯದ ಗೌರವಕ್ಕೆ ಧಕ್ಕೆ ತಂದಿದ್ದಾರೆ ಎಂಬ ಕಾರಣಕ್ಕೆ ಕುಟುಂಬದ ಸದಸ್ಯರೇ ಮಾಡುವ ಕೊಲೆಯನ್ನು ಮರ್ಯಾದೆಗೇಡು ಹತ್ಯೆ ಎನ್ನಲಾಗುತ್ತಿದೆ. ಪೋಷಕರ ಇಚ್ಛೆಗೆ ವಿರುದ್ಧವಾಗಿ ಮದುವೆಯಾಗುವುದು ಅಥವಾ ಪ್ರೀತಿಸುವುದು ಈ ಹತ್ಯೆಗಳಿಗೆ ಪ್ರಮುಖ ಕಾರಣ. ಇದಕ್ಕೆ ಇತ್ತೀಚಿನ ಎರಡು ಪುರಾವೆಗಳು ವ್ಯವಸ್ಥೆಯ ಅಧಃಪತನವನ್ನು ಸೂಚಿಸುವಂತಿದೆ. ಹುಬ್ಬಳ್ಳಿಯ ಇನಾಂವೀರಾಪುರದಲ್ಲಿ ಗರ್ಭಿಣಿ ಮಗಳನ್ನು ತಂದೆಯೇ ಹತ್ಯೆ ಮಾಡಿರುವುದು ಹಾಗೂ ಮಂಡ್ಯದಲ್ಲಿ ದಲಿತ ಹುಡುಗನನ್ನು ಪ್ರೀತಿಸಿದ ಮಗಳನ್ನು ತಂದೆಯೇ ಕೊಡಲಿಯಿಂದ ಕೊಚ್ಚಿ ಕೊಂದಿರುವುದು. ಇಂತಹ ನೂರಾರು ಘಟನೆಗಳು ನಡೆಯುತ್ತಿದ್ದರೂ ಇಂತಹ ಹತ್ಯೆಗಳನ್ನು ತಡೆಯಲು ಸಾಧ್ಯವಾಗುತ್ತಿಲ್ಲ ಏಕೆ? ಮರ್ಯಾದೆಗೇಡು ಹತ್ಯೆ ತಡೆ ಕಾಯ್ದೆ ಶೀಘ್ರ ಅನುಷ್ಠಾನ ಆಗಿ ಕಾರ್ಯರೂಪಕ್ಕೆ ತರುವ ಜರೂರತ್ತು ಇಂದಿನದು.**

■ ಕೆ. ನೀಲಾ

ಇದೇ 20ರಂದು ಹುಬ್ಬಳ್ಳಿ ತಾಲ್ಲೂಕಿನ ಇನಾಂವೀರಾಪುರದಲ್ಲಿ ನಡೆದ ಹೃದಯ ವಿದ್ರಾವಕ ಘಟನೆಯು ಚರಿತ್ರೆಯತ್ತ ಹಣಿಕಿ ಭವಿಷ್ಯದ ಬಗ್ಗೆ ಚಿಂತಿಸುವಂತೆ ಮಾಡಿತು. ಹೆತ್ತ ತಂದೆಯೇ ಏಳು ತಿಂಗಳ ಗರ್ಭಿಣಿ ಮಗಳನ್ನು ಕೊಡಲಿಯಿಂದ ಕೊಚ್ಚಿ ಕೊಲೆ ಮಾಡಿರುವನು. ಅಷ್ಟು ಮಾತ್ರವಲ್ಲ ಅವಳ ಗಂಡನ ಮನೆಯ ಎಲ್ಲ ಸದಸ್ಯರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿರುವನು. ಹಲ್ಲೆಗೆ ಒಳಗಾದವರಲ್ಲಿ ಎಳೆಮಕ್ಕಳೂ ಇವೆ. ಇದೆಂತಹ ಕ್ರೌರ್ಯ? ಹಲ್ಲೆ ಮಾಡಿದವರು ಅವಳ ತಂದೆ ಮಾತ್ರ ಅಲ್ಲ, ತಂದೆಯ ಸಹೋದರರು, ಸಂಬಂಧಿಕರೂ ಸೇರಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ ಹದಿನೈದು ವರ್ಷಗಳ ಹಿಂದೆ ಇಂತಹದೇ ಕ್ರೂರ ಘಟನೆ ನಡೆದಿತ್ತು. ದಲಿತ ಹುಡುಗನನ್ನು ಪ್ರೀತಿಸಿದ ಮಗಳನ್ನು ಸಾರ್ವಜನಿಕವಾಗಿ ರಸ್ತೆ ಮೇಲಿನಿಂದ ಎಳೆದೊಯ್ದು ಹುಡುಗನ ಮನೆಯ ಮುಂದೆ ತನ್ನ ನೂರಾರು ಸಂಬಂಧಿಕರೊಡಗೂಡಿ ಥಳಿಸಿ ಥಳಿಸಿ ಕೊನೆಗೆ ಅವಳ ಕೈಗೆ ಹಗ್ಗ ಕೊಟ್ಟು ಮರಕ್ಕೆ ನೇಣು ಹಾಕಿಕೊಳ್ಳುವಂತೆ ಆಜ್ಞಾಪಿಸಿದ್ದು ಹೆತ್ತ ತಂದೆಯೇ. ಹೊಡೆತಕ್ಕೆ ಸತ್ತಂತೆಯೇ ಆದ ಮಗಳಿಂದ ತನ್ನ ಕುತ್ತಿಗೆಗೆ ತಾನೇ ಹಗ್ಗ ಹಾಕಿಕೊಳ್ಳಲು ಆಗಲಿಲ್ಲ. ಸ್ವತಃ ತಂದೆಯೇ ಹೆತ್ತ ತಾಯಿಯ ಎದುರೇ, ಬಂಧು ಬಳಗದ ಎದುರೇ ತನ್ನ ಮಗಳ ಕುತ್ತಿಗೆಗೆ ಹಗ್ಗ ಹಾಕಿ ನೇಣು ಕುಣಿಕೆ ಎಳೆದನು. ಅಲ್ಲಿಯೇ ಇದ್ದ ದಲಿತ ಹುಡುಗನ ಮನೆಯ ಚಿಲಕ ಹಾಕಿ ಬಂಧಿಗಳನ್ನಾಗಿ ಮಾಡಲಾಗಿತ್ತು. ಸಮಸ್ತರ ಸಮಕ್ಷಮದಲ್ಲಿ ತನ್ನ ಮಗಳನ್ನು ಕೊಂದು ಬೀಗಿದ್ದು ಹೆತ್ತ ತಂದೆ.

ಇನಾಂವೀರಾಪುರದಲ್ಲಿಯೂ ತಂದೆಯೇ ತನ್ನ ಮಗಳನ್ನು, ಅದೂ ಗರ್ಭಿಣಿ ಮಗಳನ್ನು ಕೊಡಲಿಯಿಂದ ಕೊಚ್ಚಿ ಕೊಚ್ಚಿ ಕೊಂದಿರುವನು. ಎರಡೂ ಪ್ರಕರಣಗಳಿಗೆ ಪ್ರೇರಣೆ ಯಾರದ್ದು? ಯಾಕೆ ಹೀಗಾಗುತ್ತಿದೆ? 'ತಾಯಿಗಿಂತ ಬಂಧುವಿಲ್ಲ. ಉಪ್ಪಿಗಿಂತ ರುಚಿಯಿಲ್ಲ' ಎಂದು ಹೇಳಿದ್ದು ಇದೇ ಸಮಾಜ ಅಲ್ಲವೇನು? ಉಪ್ಪಿನ ರುಚಿಗೂ



ತಾಯಿಯ ಬಂಧುತ್ವಕ್ಕೂ ಏನಾಗಿದೆ ಈಗ? ನಮ್ಮ ಸಂವಿಧಾನದ ಪೀಠಿಕೆಯಲ್ಲಿ ವರ್ಗ ವರ್ಣ ಲಿಂಗ ಜಾತಿ ತಾರತಮ್ಯವನ್ನು ಕಿತ್ತು ಹಾಕಿ ಸಮಾನತೆಯ ಸಮಾಜವಾದಿಯ ನಾಡು ಕಟ್ಟುವ ಗುರಿ ಇದೆ. ಘನವಾದ ಸಂವಿಧಾನವನ್ನು ನಮ್ಮನ್ನು ನಾವೇ ಸಮರ್ಪಿಸಿಕೊಂಡು 75 ವರ್ಷಗಳು ಸಂದಿವೆ. ಹೆಣ್ಣು ಗಂಡೆನ್ನುವ ಭೇದಕ್ಕೆ ಜಾತಿ ತಾರತಮ್ಯಕ್ಕೆ ನಮ್ಮ ಸಂವಿಧಾನದಲ್ಲಿ ಅವಕಾಶವಿಲ್ಲ. ಆದಾಗ್ಯೂ ಜಾತಿ ಹೆಸರಿನ ಹಲ್ಲೆ, ಹೆಣ್ಣೆಂಬ ಕಾರಣಕ್ಕೆ ನಡೆಯುವ ದಾಳಿಗಳು ಇನ್ನೂ ಮುಂದುವರೆದಿವೆ. ಯಾಕೆ? ಭಾರತದ ಸಮಾಜವನ್ನು ನಿಯಂತ್ರಿಸುತ್ತಿರುವ ನಿಯಮಗಳು ಯಾವುವು?

ರಾಜಸ್ತಾನದ ಜಾಲೋರ ಜಿಲ್ಲೆಯ ಸುಂದಮಾಥಾ ಪಟ್ಟಿಯ ಸುಮಾರು 15 ಗ್ರಾಮಗಳಲ್ಲಿನ ಯುವತಿಯರು ಮತ್ತು ಸೊಸೆಯಂದಿರು ಕ್ಯಾಮೆರಾ ಇರುವ ಸ್ಮಾರ್ಟ್‌ಫೋನುಗಳನ್ನು ಬಳಸುವಂತಿಲ್ಲ ಎಂದು ಚೌಧರಿ (ಜಾಟ್) ಸಮುದಾಯದ ಖ್ಯಾಪ್ ಪಂಚಾಯತ್ ಈ ನಿರ್ಧಾರ ಕೈಗೊಂಡಿದೆ. ಇದೊಂದು ಆಘಾತಕಾರಿ ಅಂಶವಾಗಿದೆ. ಚೌಧರಿ ಎಂಬ ಮೇಲ್ಸಮುದಾಯವು, ವಿಜ್ಞಾನ ತಂತ್ರಜ್ಞಾನದ ಯುಗದಲ್ಲಿಯೂ ಮಹಿಳೆಯರನ್ನು ನಿಯಂತ್ರಿಸುವ ದ್ರಾಷ್ಟ್ಯತೆ ತೋರುತ್ತಿದೆ.

ಒಂದೆಡೆ ಜಾತಿ ಹೆಸರಿನ ದೌರ್ಜನ್ಯ, ಇನ್ನೊಂದೆಡೆ ಎಲ್ಲ ಮಹಿಳೆಯರನ್ನು ನಿಯಂತ್ರಿಸುವ, ಅವರ ಮೇಲೆ ದೌರ್ಜನ್ಯ ಎಸಗುವ ಪ್ರವೃತ್ತಿ ಹೆಚ್ಚುತ್ತಿರುವುದು ತೀವ್ರ ಆತಂಕಕ್ಕೆ ಎಡೆ ಮಾಡಿದೆ. ಹಾಗಾದರೆ ಸಮಾಜವನ್ನು ಅಸಮಾನತೆಯೆಡೆಗೆ, ಹಿಂಸೆಯೆಡೆಗೆ ದೂಡುತ್ತಿರುವ ಅಂಶಗಳು ಯಾವುವು?